

# ಗೊಂಬೆ ಹೇಳುತ್ತೈತೆ...

ಈ ಗೊಂಬೆಗಳು ಹೇಳುವುದು ಗಿನ್ನೆಸ್ ವಿಶ್ವದಾಖಲೆ ಪ್ರದರ್ಶನದ ಕಥೆಯನ್ನು. ಮಹಿಳೆಯರ ಸ್ವಾವಲಂಬನೆಗೆ ಉದ್ದೇಶದ 'ಸಂಸ್ಕೃತ ಗೊಂಬೆ ತಯಾರಿಕಾ ಸಂಸ್ಥೆ' ತನ್ನ ಚಟುವಟಿಕೆಗಳನ್ನು ದೇಶದ ವಿವಿಧ ಭಾಗಗಳಲ್ಲಿ ನಡೆಸುತ್ತಿದೆ. ಈ ಬೊಂಬೆಯಾನ ದೇಸಿ ಸಂಸ್ಕೃತಿಯ ಸೊಗಸಾದ ಅಭಿವ್ಯಕ್ತಿಯೂ ಹೌದು.

■ ನಾಗರತ್ನ ಜಿ.

ಅಬ್ಬಾ ಎಷ್ಟೊಂದು ಸಂದಣಿ! ಒಬ್ಬೊಬ್ಬರದೂ ಒಂದೊಂದು ವೇಷ. 'ಬಾಹುಬಲಿ' ಸಿನಿಮಾದ ನಾಯಕನಂತೆ ಶಿವಲಿಂಗವನ್ನು ಹೆಗಲೇರಿಸಿ ನಿಂತವನೊಬ್ಬ, ಮದುವಣಗಿತ್ತಿ ವೇಷದಲ್ಲಿ ನಾಚಿ ನಿಂತವಳೊಬ್ಬಳು... ಸೀರೆಯುಟ್ಟ ಸಿಂಗಾರಿ, ಲಂಗದಾವಣಿಯಲ್ಲಿ ಮಿನುಗುವ ಬಂಗಾರಿ... ಅರೆ, ಅರ್ಧನಾರೀಶ್ವರನೂ ಕೈಲಾಸದಿಂದ ಇಳಿದುಬಂದು ತೆಪ್ಪಗೆ ಕೂತಿದ್ದಾನೆ ನೋಡಿ. ನೇಪಾಳದಿಂದ ಬಂದು ಬೀಸಣಿಕೆ ಬೀಸುತ್ತ ನಿಂತ ಬಿನ್ನಾಣಗಿತ್ತಿಯೂ ಬೆರಗಾಗುವ ಹಾಗಿದೆ ಕೃಷ್ಣ ಕೊಳಲಗಾನದ ಮೋಡಿ.

ದೂರದಿಂದ ನೋಡಿದರೆ ಡ್ರಿಲ್ ಮಾಸ್ತರರ ಸೀಟಿಗೆ ಹೆದರಿ ಸಾಲಾಗಿ ನಿಂತಂತೆ ತೋರುವ ಅವರೆಲ್ಲ ಹತ್ತಿರ ಹೋದ ಹಾಗೆ ಬಗೆಬಗೆಯ ಹೊಳಪಿನಲ್ಲಿ ಮಿನುಗಲು ಶುರುವಾದರು. ಮುಟ್ಟಿ ನೋಡಲೇ ಒಮ್ಮೆ? ನೆತ್ತಿ ನೇವರಿಸಲೇ? ಎಷ್ಟು ಚಂದದ ಹುಡುಗಿ, ಒಮ್ಮೆ ಎತ್ತಿ ಮುದ್ದಾಡಲೇ? ಅವರೆಲ್ಲರೂ ಮುಟ್ಟಿದರೂ ಮುತ್ತಿಕ್ಕಿದರೂ ಕೊಂಚವೂ ಮಿಸುಕಾಡದೇ ಇದ್ದ ಹಾಗೆಯೇ ಇದ್ದರು. ಹಾಂ, ಅವರೆಲ್ಲ ಅನಿಮೇಷರು; ಗೊಂಬೆಗಳು.

'ಸಂಸ್ಕೃತ ಗೊಂಬೆ ತಯಾರಿಕಾ ಸಂಸ್ಥೆ' ಬೆಂಗಳೂರಿನಲ್ಲಿ